**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ,ಅರಸೀಕೆರೆ.**

**ಸಿ.ಸಿ. 212/2024**

**ಫಿರ್ಯಾದುದಾರರು :** ಚಂದ್ರಶೇಖರ್ ಡಿ.ಆರ್

: ವಿರುದ್ಧ:

**ಆರೋಪಿ** : ಡಿ.ಜೆ.ಶಿವಕುಮಾರ್

ಆಪಾದನೆ

ಶ್ರೀ. ಕಿರಣ್ ಕುಮಾರ್ ಡಿ.ವಡಿಗೇರಿ, ಬಿ.ಎ.ಎಲ್. ಎಲ್.ಎಲ್.ಬಿ. ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಸೀಕೆರೆ ಆದ ನಾನು, ಆರೋಪಿಯಾದಃ-

ಡಿ.ಜೆ.ಶಿವಕುಮಾರ್ ಬಿನ್ ಜಯಣ್ಣ,
47 ವರ್ಷ, 147 ಮೈನ್ ರೋಡ್,
ಶಶಿವಾಳ ರಸ್ತೆ, ದೊಡ್ಡಮೇಟಿಕುರ್ಕೆ ಗ್ರಾಮ,
ಕಣಕಟ್ಟೆ ಹೋಬಳಿ, ಅರಸೀಕೆರೆ ತಾಲ್ಲೂಕು,

ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ-

ಫಿರ್ಯಾದುದಾರರು ಮತ್ತು ಆರೋಪಿತರಾದ ನೀವು ಪರಸ್ಪರ ಪರಿಚಯಸ್ಥರಾಗಿದ್ದು ನಿಮ್ಮ ಗೃಹಕೃತ್ಯದ ಖರ್ಚಿಗಾಗಿ, ವೈಯಕ್ತಿಕ ಸಾಲ ತಿರುವಳಿ ಹಾಗೂ ದರ್ದು ನಿಮಿತ್ತ ಫಿರ್ಯಾದುದಾರರಿಂದ ದಿನಾಂಕ 17-05-2023 ರಂದು ರೂ.2,20,000/- ಗಳನ್ನು ಕೈಗಡ ಸಾಲವಾಗಿ ನಗದು ರೂಪದಲ್ಲಿ ಪಡೆದುಕೊಂಡಿರುತ್ತೀರಿ. ಸದರಿ ಸಾಲದ ಹಣವನ್ನು 3 ತಿಂಗಳೊಳಗಾಗಿ ಮರು ಪಾವತಿ ಮಾಡುವುದಾಗಿ ಹೇಳಿರುತ್ತೀರಿ. ಸದರಿ ಅವಧಿ ಮುಗಿದ ನಂತರ ಫಿರ್ಯಾದುದಾರರು ದಿಃ18-08-2023 ರಂದು ನಿಮ್ಮನ್ನು ಸಾಲದ ಹಣ ಮರುಪಾವತಿಸುವಂತೆ ಕೇಳಿದಾಗ ರೂ.2,20,000ರೂ.ಗಳಿಗೆ ಆಕ್ಸಿಸ್ ಬ್ಯಾಂಕ್ ಲಿಮಿಟೆಡ್, ಅರಸೀಕೆರೆ ಶಾಖೆಯ ಚೆಕ್ ನಂಃ 004211 ನ್ನು ದಿಃ 18-08-2023 ರ ದಿನಾಂಕ ನಮೂದಿಸಿ ಫಿರ್ಯಾದುದಾರರ ಹೆಸರಿಗೆ ಬರೆದುಕೊಟ್ಟಿರುತ್ತೀರಿ. ಸದರಿ ಹಣವನ್ನು ನಗದೀಕರಿಸಲು ಫಿರ್ಯಾದುದಾರರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅರಸೀಕೆರೆ ಶಾಖೆಯ ಮುಖಾಂತರ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಚೆಕ್ ನಗದಾಗುವಷ್ಟು ಹಣ ಇಲ್ಲ ಎಂದು " Funds Insufficient" ಎಂಬ ಷರಾದೊಂದಿಗೆ ಸದರಿ ಚೆಕ್ಕನ್ನು ಅಮಾನ್ಯಗೊಳಿಸಿ ದಿಃ 19-08-2023 ರಂದು ವಾಪಸ್ಸು

ಮಾಡಿರುತ್ತಾರೆ. ಈ ಬಗ್ಗೆ ನಿಮಗೆ ಫಿರ್ಯಾದುದಾರರಿಂದ ದಿಃ 23-08-2023 ರಂದು ನೋಟೀಸನ್ನು ನೀಡಿದ್ದು, ಸದರಿ ನೋಟೀಸು ದಿಃ24-08-2023 ರಂದು ಖುದ್ದು ಜಾರಿಯಾಗಿದ್ದು ಸದರಿ ನೋಟೀಸಿನ ವಿಚಾರ ಆರೋಪಿಯಾದ ನಿಮಗೆ ತಿಳಿದಿದ್ದರೂ ಸಹ ಸದರಿ ಚೆಕ್ ನ ಹಣವನ್ನು ಪಾವತಿಸದೇ ಹಾಗೂ ಸದರಿ ನಿಮ್ಮ ಖಾತೆಯನ್ನು ಮುಚ್ಚಿದ್ದರೂ ಸಹ ಸದರಿ ವಿಚಾರವನ್ನು ಫಿರ್ಯಾದುದಾರರಿಂದ ಮುಚ್ಚಿಟ್ಟು ಮೋಸ ಮಾಡುವ ಉದ್ದೇಶದಿಂದ ಚೆಕ್ ನೀಡಿರುತ್ತೀರಿ. ಈ ಮೂಲಕ "ನೆಗೋಷಿಯಬಲ್ ಇನ್ಸ್ಟ್ರುಮೆಂಟ್ಸ್ " ಕಲಂ 138ಎನ್.ಐ ಆಕ್ಟ್ ರಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾತಿಯಲ್ಲಿ ಮಾಡಿರುತ್ತೀರಿ.

**ಪ್ರಶ್ನೆಃ-** ಮೇಲೆ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?

**ಉತ್ತರಃಃ ತಿಳಿಯಿತು**

**ಪ್ರಶ್ನೆಃ-** ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರೇ?ಅಥವಾ ವಿಚಾರಣೆಯಾಗಬೇಕೆ?

**ಉತ್ತರಃಃ** ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ಅವರು ಅರ್ಥೈಸಿಕೊಂಡು ನೀಡಿದ ಉತ್ತರವನ್ನು ಸರಿಯಾಗಿ ನನ್ನ ಸ್ವ ಹಸ್ತದಿಂದ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

( ಕಿರಣ್‌ಕುಮಾರ್ ಡಿ.ವಡಿಗೇರಿ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಅರಸೀಕೆರೆ.